

بسم اللہِ الرّحمٰن الرّحیم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–07–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ اِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದಿನ ಖುತ್‌ಬದಲ್ಲಿ ಇರಾನಿಗಳ ವಿರುದ್ಧ ಹಝ್‌ರತ್ ಅಬೂಬಕರ್(ರ)ರವರು ನಡೆಸಿದ ಯುದ್ಧಗಳ ಬಗ್ಗೆ ವಿವರಿಸುವೆನು. ಹೀಗೆ ನಡೆಸಲಾದ ಒಂದು ಯುದ್ಧದ ಹೆಸರು ಝಾತುಲ್ ಸಲಾಸಿಲ್ ಅಥವಾ ಕಾಝಿಮ ಯುದ್ಧ ಎಂದಾಗಿದೆ. ಈ ಯುದ್ಧ ಹಿಜರಿ 12ರ ಮುಹರ್ರಂ ತಿಂಗಳಲ್ಲಿ ನಡೆಯಿತು. ಈ ಯುದ್ಧಕ್ಕೆ ಮೂರು ಹೆಸರುಗಳಿವೆ. ಜಂಗೆ ಝಾತುಲ್ ಸಲಾಸಿಲ್, ಜಂಗೇ ಕಾಝಿಮ ಮತ್ತು ಜಂಗೆ ಹಫೀರ್. ಜಂಗೆ ಝಾತುಲ್ ಸಲಾಸಿಲ್ ಎಂದರೆ ಸಂಕೋಲೆಗಳ ಯುದ್ಧ ಎಂದು ಅರ್ಥ. ಇರಾನಿ ಸೈನಿಕರನ್ನು ಒಬ್ಬರಿನ್ನೊಬ್ಬರೊಂದಿಗೆ ಸಂಕೋಲೆಗಳ ಮೂಲಕ ಜೋಡಿಸಲಾಗಿತ್ತು. ಸೈನ್ಯದಿಂದ ಯಾರೂ ಓಡಿ ಹೋಗದಿರಲಿ ಎಂದು ಹೀಗೆ ಮಾಡಲಾಗಿತ್ತು. ಈ ಯುದ್ಧದಲ್ಲಿ ಮುಸ್ಲಿಮ್ ಸೈನಿಕರ ಸಂಖ್ಯೆ 18 ಸಾವಿರವಾಗಿತ್ತು. ಅವರ ಸೇನಾಧಿಪತಿ ಹಝ್‌ರತ್ ಖಾಲಿದ್ ಬಿನ್ ವಲೀದ್ ಆಗಿದ್ದರು. ಇರಾನಿಗಳ ಸೇನಾಧಿಪತಿಯಾದ ಹುರ್‌ಮುಝ್ ಎಂಬವನು ಆ ಪ್ರದೇಶದ ಆಡಳಿತಾಧಿಕಾರಿಯೂ ಇರಾನಿಯರಲ್ಲಿ ಬಹಳ ಗೌರವಾರ್ಹನೂ ಕುಲೀನ ಕುಟುಂಬದವನೂ ಆಗಿದ್ದನು. ಇರಾನಿಯರಲ್ಲಿ ಅವನ ಘನತೆ ಬಹಳ ಅಂಗೀಕರಿಸಲ್ಪಟ್ಟದ್ದಾಗಿತ್ತು. ಆದರೆ ಇರಾಖ್ ದೇಶದಲ್ಲಿ ವಾಸಿಸುತ್ತಿದ್ದ ಅರಬಿಗಳು ಅವನನ್ನು ಅತ್ಯಂತ ನಿಕೃಷ್ಟ ದೃಷ್ಟಿಯಿಂದ ನೋಡುತ್ತಿದ್ದರು. ಏಕೆಂದರೆ ಅವನು ಗಡಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಗಣ್ಯರಾದ ಜನರ ಮೇಲೆ ಬಹಳ ದೌರ್ಜನ್ಯ ಮಾಡುತ್ತಿದ್ದನು. ಮುಸ್ಲಿಮೇತರ ಅರಬಿಗಳು ಅವನನ್ನು ಎಷ್ಟು ದ್ವೇಷಿಸುತ್ತಿದ್ದರೆಂದರೆ, ಕೀಳು ವರ್ತನೆಯ ದುಸ್ವಭಾವದ ಕೆಟ್ಟ ಪ್ರಕೃತಿಯ ಮತ್ತು ಉಪಕಾರದ ಬಗ್ಗೆ ಸ್ಮರಣೆ ಇಲ್ಲದವರನ್ನು ಅವರು ಹುರ್‌ಮುಝ್ ಎಂದು ಕರೆಯುತ್ತಿದ್ದರು.

ಯಮಾಮದಿಂದ ಹೊರಡುವ ಮೊದಲು ಹಝ್‌ರತ್ ಖಾಲಿದ್ ಬಿನ್ ವಲೀದ್‌ರವರು ಹುರ್‌ಮುಝ್‌ನಿಗೆ ಪತ್ರ ಬರೆದರು. ಆ ಪತ್ರ ಲಭಿಸಿದ ಕೂಡಲೇ ಹುರ್‌ಮುಝ್‌ನು ಇರಾನಿನ ದೊರೆ ಅರ್ದಶೇರ್‌ನಿಗೆ ಆ ಪತ್ರದ ಬಗ್ಗೆ ತಿಳಿಸಿ ಸೈನ್ಯವನ್ನು ಜಮಾಯಿಸಿದನು. ವೇಗವಾಗಿ ಚಲಿಸುವ ಒಂದು ಸೈನಿಕ ದಳದೊಂದಿಗೆ ಹುರ್‌ಮುಝ್‌ನು ಹಝ್‌ರತ್ ಖಾಲಿದ್ ಬಿನ್ ವಲೀದರನ್ನು ಎದುರಿಸಲು ಕಾಝಿಮ್ ಎಂಬಲ್ಲಿಗೆ ತಲಪಿದನು. ಆದರೆ ಆ ಮಾರ್ಗದಲ್ಲಿ ಅವರಿಗೆ ಹಝ್‌ರತ್ ಖಾಲಿದ್(ರ)ರನ್ನು ಕಾಣಲಾಗಲಿಲ್ಲ. ಮುಸ್ಲಿಮರ ಸೈನ್ಯ ಹಫೀರ್ ಎಂಬಲ್ಲಿ ಜಮಾಯಿಸಿದೆ ಎಂದು ಸಮಾಚಾರ ಲಭಿಸಿತು. ಆದುದರಿಂದ ಅವನು ಹಫೀರ್ ಕಡೆಗೆ ಹೊರಟನು. ಹಫೀರ್ ತಲಪಿದ ಕೂಡಲೆ ಹುರ್‌ಮುಝ್ ಸೈನಿಕರನ್ನು ಸಾಲುಗಟ್ಟಿ ನಿಲ್ಲಿಸಿದನು. ತನ್ನ ಎಡಬಲಗಳಲ್ಲಿ ಖುಬಾಝ್ ಮತ್ತು ಅಸೂಶ್‌ಜಾನ್ ಎಂಬ ಇಬ್ಬರು ಸಹೋದರರನ್ನು ನಿಶ್ಚಯಿಸಿದನು. ಇರಾನಿ ಸೈನಿಕರು ಪರಸ್ಪರ ಸಂಕೋಲೆಗಳಿಂದ ಜೋಡಿಸಿ ಯಾರೂ ಓಡಿ ಹೋಗದಿರುವಂತೆ ಮಾಡಿದರು.

ಹುರ್‌ಮುಝ್‌ನು ಹಫೀರ್‌ಗೆ ಬರುವುದಾಗಿ ಹಝ್‌ರತ್ ಖಾಲಿದ್ ಬಿನ್ ವಲೀದ್(ರ)ರಿಗೆ ಸಮಾಚಾರ ಲಭಿಸಿದಾಗ ಅವರು ತನ್ನ ಸೈನ್ಯವನ್ನು ಕಾಝಿಮದ ಕಡೆಗೆ ತಿರುಗಿಸಿದರು. ಈ ವಿಷಯ ತಿಳಿದ ಕೂಡಲೆ ಹುರ್‌ಮುಝ್ ತನ್ನ ಸೈನ್ಯವನ್ನು ಕಾಝಿಮಕ್ಕೆ ಸಾಗಿಸಿ ಅಲ್ಲಿ ಶಿಬಿರ ಹೂಡಿದನು. ಮುಸ್ಲಿಮ್ ಸೈನ್ಯ ನಡೆಯುತ್ತಾ ಮುಂದೆ ಸಾಗಿ ಶತ್ರುಗಳನ್ನು ಎದುರಿಸುತ್ತಾ ಇದ್ದಾಗ ಅಲ್ಲಾಹನು ಒಂದು ಮೋಡವನ್ನು ರವಾನಿಸಿದನು. ಮುಸ್ಲಿಮ್ ಸೈನ್ಯದ ಹಿಂಬಾಗದಲ್ಲಿ ಮಳೆ ಸುರಿಯಿತು. ಆ ಕಾರಣದಿಂದ ಮುಸ್ಲಿಮರ ಬಲ ವರ್ಧಿಸಿತು.

ಹುರ್‌ಮುಝ್ ತನ್ನ ಭದ್ರತೆಯ ದಳದೊಂದಿಗೆ ಹೇಳಿದನು – ನಾನು ಖಾಲಿದ್ ಬಿನ್ ವಲೀದನನ್ನು ನನ್ನೊಂದಿಗೆ ಒಬ್ಬಂಟಿಗನಾಗಿ ಹೋರಾಡಲು ಆಹ್ವಾನಿಸುತ್ತೇನೆ. ನಾವಿಬ್ಬರೂ ಹೋರಾಡುತ್ತಾ ಇರುವಾಗ ನೀವು ಅಚಾನಕವಾಗಿ ಖಾಲಿದ್ ಬಿನ್ ವಲೀದನನ್ನು ಆಕ್ರಮಿಸಬೇಕು. ಹಾಗೆ ಹುರ್‌ಮುಝ್ ರಣಾಂಗಣದಲ್ಲಿ ಇಳಿದು ಹಝ್‌ರತ್ ಖಾಲಿದ್ ಬಿನ್ ವಲೀದರನ್ನು ತನ್ನನ್ನು ಏಕಾಂಗಿಯಾಗಿ ಎದುರಿಸಲು ಆಹ್ವಾನಿಸಿದನು. ಹಝ್‌ರತ್ ಖಾಲಿದ್ ಬಿನ್ ವಲೀದ್ ಮುಂದೆ ಬಂದರು ಮತ್ತು ಇಬ್ಬರ ಮಧ್ಯೆ ಕಾಳಗ ಪ್ರಾರಂಭವಾಯಿತು. ಹುರ್‌ಮುಝ್‌ನನ್ನು ಹಝ್‌ರತ್ ಖಾಲಿದ್ ಬಿನ್ ವಲೀದ್ ತಿವಿದರು. ಆಗ ಹುರ್‌ಮುಝ್‌ನ ಭದ್ರತಾ ದಳದವರು ವಂಚನಾತ್ಮಕರಾಗಿ ಹಝ್‌ರತ್ ಖಾಲಿದ್ ಬಿನ್ ವಲೀದ್‌ರನ್ನು ಆಕ್ರಮಿಸಿದರು ಮತ್ತು ಅವರನ್ನು ಸುತ್ತುವರಿದರು. ಅದಾಗಲೇ ಹಝ್‌ರತ್ ಖಾಲಿದ್ ಬಿನ್ ವಲೀದ್(ರ) ಹುರ್‌ಮುಝ್‌ನನ್ನು ಹತ್ಯೆ ಮಾಡಿದ್ದರು. ಹಝ್‌ರತ್ ಖಅ್‌ಖಾಅ್ ಬಿನ್ ಅಮ್‌ರ್(ರ) ಇರಾನಿಗಳ ಈ ವಂಚನೆಯನ್ನು ಕಂಡಾಗ ಹುರ್‌ಮುಝ್‌ನ ಭದ್ರತಾ ದಳದ ಮೇಲೆ ಆಕ್ರಮಣ ಮಾಡಿ ಅವರನ್ನು ಸುತ್ತುವರಿದು ಅವರನ್ನೆಲ್ಲ ಹತ್ಯೆ ಮಾಡಿದರು. ಇರಾನಿಗಳಿಗೆ ಸೋಲು ಸಂಭವಿಸಿತು. ಅವರು ಓಡಿ ಹೋದರು. ಓಡಿ ಹೋದವರಲ್ಲಿ ಖುಬಾಝ್ ಮತ್ತು ಅನೂಶ್‌ಜಾನ್ ಸಹ ಇದ್ದರು. ಯುದ್ಧ ಕೊನೆಗೊಂಡಾಗ ಶತ್ರು ಸೈನ್ಯದಿಂದ ಹಿಡಿಗೂಡಿದ ಸಂಪತ್ತನ್ನು ಹಝ್‌ರತ್ ಅಬೂಬಕರ್(ರ)ರವರಿಗೆ

ಕಳುಹಿಸಲಾಯಿತು. ಆ ಸಂಪತ್ತಿನಿಂದ ಒಂದು ಲಕ್ಷ ದಿರ್‌ಹಂ ಬೆಲೆ ಬಾಳುವ ಹುರ್‌ಮುಝ್‌ನ ವಜ್ರ ಖಚಿತ ಕಿರೀಟ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರಿಗೆ ನೀಡಲಾಯಿತು.

ಇನ್ನು ಅಬ್ಲ ಯುದ್ಧದ ವಿವರಣೆ: ಇದು ಹಿಜರಿ 12ರಲ್ಲಿ ನಡೆಯಿತು. ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್(ರ)ರಿಗೆ ಇರಾಖ್‌ನಲ್ಲಿ ಯುದ್ಧವನ್ನು ಅಬ್ಲದಿಂದ ಪ್ರಾರಂಭಿಸಬೇಕೆಂದು ನಿರ್ದೇಶನ ನೀಡಿದ್ದರು. ಪರ್ಶಿಯನ್ ಗಲ್ಫ್‌ನ ಬದಿಯಲ್ಲಿದ್ದ ಅಬ್ಲ ಸಮುದ್ರದ ಕಿನಾರೆಯಲ್ಲಿತ್ತು. ಇರಾಖ್‌ನಿಂದ ಸಿಂಧ್ ಮತ್ತು ಹಿಂದೂಸ್ಥಾನದ ಇತರ ಭಾಗಗಳಿಗೆ ಸಂಚಾರ ಮಾಡುತ್ತಿದ್ದ ವ್ಯಾಪಾರಿಗಳ ತಂಡ ಮೊದಲು ಅಬ್ಲದಲ್ಲಿ ತಂಗುತ್ತಿತ್ತು. ಅಬ್ಲವನ್ನು ಜಯಿಸಿದ ಬಗ್ಗೆ ಎರಡು ವರದಿಗಳಿವೆ. ಒಂದು ವರದಿ ಹೀಗೆ: ಹಝ್ರತ್ ಅಬೂಬಕರ್(ರ)ರವರ ಆಡಳಿತೆಯ ಕಾಲದಲ್ಲಿ ಮುಸ್ಲಿಮರು ಅಬ್ಲವನ್ನು ಸ್ವಾಧೀನಪಡಿಸಿದರು. ಆದರೆ ಅನಂತರ ಅದನ್ನು ಇರಾನಿಗಳು ವಶಪಡಿಸಿಕೊಂಡರು. ನಂತರ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಕಾಲದಲ್ಲಿ ಅಬ್ಲ ಪೂರ್ಣವಾಗಿ ಮುಸ್ಲಿಮರ ಸ್ವಾಧೀನಕ್ಕೆ ಬಂತು.

ಜಂಗೇ ಝಾತುಲ್ ಸಲಾಸಿಲ್ ಕೊನೆಗೊಂಡ ನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಸೋತು ಹೋದ ಇರಾನಿ ಸೈನ್ಯವನ್ನು ಬೆನ್ನಟ್ಟಲು ಹಝ್ರತ್ ಮಸ್‌ನರನ್ನು ಕಳುಹಿಸಿದರು. ಅದೇ ಸಮಯ ಹಝ್ರತ್ ಮುಅಖ್ಖಿಲ್‌ರನ್ನು ಅಬ್ಲಕ್ಕೆ ಕಳುಹಿಸಿ ಅಲ್ಲಿ ಯುದ್ಧದಲ್ಲಿ ಗಳಿಸಿದ ಸಂಪತ್ತು ಸಂಗ್ರಹಿಸಿ ಯುದ್ಧದಲ್ಲಿ ಸೋತವರನ್ನು ಬಂಧಿಸಲು ಹೇಳಿದರು. ಹಝ್ರತ್ ಮುಅಖ್ಖಿಲ್ ಅಬ್ಲಕ್ಕೆ ತಲಪಿ ಯುದ್ಧದಲ್ಲಿ ಗಳಿಸಿದ ಸಂಪತ್ತನ್ನು ಸಂಗ್ರಹಿಸಿ ಯುದ್ಧದಲ್ಲಿ ಸೋತುಹೋದವರನ್ನು ಬಂಧಿಸಿದರು. ಇನ್ನೊಂದು ವರದಿ ಪ್ರಕಾರ ಅಬ್ಲವನ್ನು ಹಝ್ರತ್ ಉಮರ್(ರ)ರವರ ಕಾಲದಲ್ಲಿ ಜಯಿಸಲಾಯಿತು.

ಇನ್ನೊಂದು ಯುದ್ಧ ಜಂಗೇ ಮಝಾರ್. ಇದು ಸಹ ಹಿಜರಿ 12ರಲ್ಲಿ ನಡೆದ ಯುದ್ಧವಾಗಿದೆ. ಜಂಗೇ ಸಲಾಸಿಲ್ ಸಂದರ್ಭದಲ್ಲಿ ಹುರ್‌ಮುಝ್ ತನಗೆ ಸಹಾಯಕ ಸೈನ್ಯವನ್ನು ಕಳುಹಿಸಬೇಕೆಂದು ಇರಾನಿನ ದೊರೆಯನ್ನು ಅಪೇಕ್ಷಿಸಿದಾಗ ಇರಾನಿನ ದೊರೆ ಖಾರಿನ್ ನೇತೃತ್ವದಲ್ಲಿ ಒಂದು ಸೈನ್ಯವನ್ನು ಕಳುಹಿಸಿದ್ದನು. ಆದರೆ ಆ ಸೈನ್ಯ ಮಝಾರ್ ಎಂಬ ಸ್ಥಳಕ್ಕೆ ತಲಪಿದಾಗ ಹುರ್‌ಮುಝ್ ಸೋತು ಕೊಲ್ಲಲ್ಪಟ್ಟನೆಂಬ ವರದಿ ತಲಪಿತು. ಹುರ್‌ಮುಝ್‌ನ ಸೋತು ಹೋದ ಸೈನಿಕರು ಸಹ ಖಾರಿನ್ ಬಳಿಗೆ ತಲಪಿದರು. ಖಾರಿನ್ ಯುದ್ಧ ಮಾಡಲು ನಿರ್ಧರಿಸಿ ಮಝಾರ್‌ನಲ್ಲಿ ಶಿಬಿರ ಹೂಡಿದನು. ಖುಬಾಝ್ ಮತ್ತು ಅನುಶ್‌ಜಾನ್‌ರನ್ನು ಸೇನಾ ದಳದ ಪ್ರಧಾನ ನಾಯಕರನ್ನಾಗಿ ನಿಶ್ಚಯಿಸಿದನು.

ಹಝ್ರತ್ ಖಾಲಿದ್(ರ) ಖಾರಿನ್‌ನ ಸೈನ್ಯದ ಬಗ್ಗೆ ತಿಳಿದಾಗ ಮಝಾರ್‌ಗೆ ತನ್ನ ಸೈನ್ಯವನ್ನು ಸಾಗಿಸಿ ಯುದ್ಧಕ್ಕೆ ಸನ್ನದ್ಧರಾದರು. ಎರಡು ಸೈನ್ಯಗಳ ಮಧ್ಯೆ ತೀವ್ರವಾಗಿ ಯುದ್ಧ ನಡೆಯಿತು. ಖಾರಿನ್ ಏಕಾಂಗಿ ಕದನಕ್ಕೋಸ್ಕರ ಮುಂದೆ ಸಾಗಿದಾಗ ಹಝ್ರತ್ ಖಾಲಿದ್(ರ) ಮತ್ತು ಹಝ್ರತ್ ಮುಅಖ್ಖಿಲ್(ರ) ಅವನನ್ನು ಎದುರಿಸಿದರು. ಹಝ್ರತ್ ಮುಅಖ್ಖಿಲ್(ರ) ಖಾರಿನ್‌ನನ್ನು ವಧಿಸಿದರು. ಹಝ್ರತ್ ಆಸಿಮ್(ರ)ರವರು ಅನುಶ್‌ಜಾನನ್ನೂ ಹಝ್ರತ್ ಅದೀ(ರ)ರವರು ಖುಬಾಝ್‌ನನ್ನೂ ಕೊಂದರು. ಈ ಮೂವರು ಸೇನಾಧಿಪತಿಗಳ ಹತ್ಯೆಯ ಕಾರಣದಿಂದ ಇರಾನಿ ಸೈನಿಕರು ಧೈರ್ಯಗುಂದಿದವರಾದರು. ಅವರು ರಣಾಂಗಣ ಬಿಟ್ಟು ಓಡಿಹೋದರು. ಈ ಯುದ್ಧದಲ್ಲಿ ಅನೇಕ ಇರಾನಿ ಸೈನಿಕರು ಕೊಲ್ಲಲ್ಪಟ್ಟರು.

ಇನ್ನೊಂದು ಯುದ್ಧ ಜಂಗೇ ವಲಜ. ಕಸ್‌ಕರ್‌ಗೆ ಸಮೀಪ ಬರಡು ಪ್ರದೇಶದಲ್ಲಿ ಹಿಜರಿ 12ರ ಸಫರ್ ತಿಂಗಳಲ್ಲಿ ಈ ಯುದ್ಧ ನಡೆಯಿತು. ಇರಾನ್ ದೇಶದಲ್ಲಿ ಬಕರ್ ಬಿನ್ ವಾಯಿಲ್ ಎಂಬ ಗೋತ್ರದ ಜನರು ಕ್ರೈಸ್ತರಾಗಿದ್ದರು. ಆ ಗೋತ್ರದ ಮುಖಂಡರನ್ನು ಇರಾನಿನ ದೊರೆ ತನ್ನ ಆಸ್ಥಾನಕ್ಕೆ ಕರೆದು ಅವರನ್ನು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಸನ್ನದ್ಧರಾಗುವಂತೆ ಮಾಡಿದನು. ಆ ಗೋತ್ರದ ಸೈನಿಕರ ಸೇನಾಧಿಪತಿಯಾಗಿ ಕುದುರೆ ಸವಾರಿಯಲ್ಲಿ ಪ್ರಸಿದ್ಧನಾಗಿದ್ದ ಅಮ್‌ದರ್‌ಝುಗರ್‌ನನ್ನು ನಿಶ್ಚಯಿಸಲಾಯಿತು. ಈ ಸೈನ್ಯ ವಲಜದ ಕಡೆಗೆ ಹೊರಟಿತು. ಹೀರ ಮತ್ತು ಕಸ್‌ಕರ್ ಪ್ರದೇಶದ ಜನರು ಮತ್ತು ರೈತರು ಸಹ ಆ ಸೈನ್ಯದಲ್ಲಿ ಸೇರಿಕೊಂಡರು. ಇರಾನಿ ಸೈನ್ಯ ವಲಜದಲ್ಲಿ ಜಮಾಯಿಸಿದ ಬಗ್ಗೆ ವರದಿ ಲಭಿಸಿದಾಗ ಹಝ್ರತ್ ಖಾಲಿದ್(ರ) ಇರಾನಿ ಸೈನ್ಯವನ್ನು ಮೂರು ದಿಕ್ಕುಗಳಿಂದ ಅಚಾನಕವಾಗಿ ಆಕ್ರಮಿಸಲು ಮತ್ತು ಆ ಸೈನ್ಯವನ್ನು ಚಲ್ಲಾಪಿಲ್ಲಿ ಮಾಡಲು ನಿರ್ಧರಿಸಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ತೀವ್ರವಾಗಿ ಹೋರಾಡಿದರು. ಶತ್ರು ಸೈನ್ಯದ ಎರಡು ಬದಿಗಳಲ್ಲಿ ಮುಸ್ಲಿಮ್ ಸೈನಿಕರನ್ನು ಹೊಂಚು ಹಾಕಲು ಇರಿಸಲಾಗಿತ್ತು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮುಂಬಾಗದಿಂದ ಆಕ್ರಮಣ ಮಾಡಿದಾಗ ಶತ್ರು ಸೈನಿಕರು ಓಡಿ ಹೋಗುವಾಗ ಹೊಂಚುಹಾಕಲು ಇರಿಸಲಾದ ಮುಸ್ಲಿಮ್ ಸೈನಿಕರು ಅವರನ್ನು ಸುತ್ತುವರಿದರು. ಶತ್ರುಗಳ ಸೈನ್ಯದ ನಾಯಕನು ಹೀನೈಸಲ್ಪಟ್ಟು ಕೊಲ್ಲಲ್ಪಟ್ಟನು. ಸೋತ ಸೈನಿಕರೊಂದಿಗೆ ಹಝ್ರತ್ ಖಾಲಿದ್(ರ) ತಾನು ಹಿಂದೆ ವರ್ತಿಸುತ್ತಿದ್ದ ಹಾಗೆಯೇ ವರ್ತಿಸಿದರು. ಅಂದರೆ ಅವರಲ್ಲಿ ಯಾರನ್ನೂ ಕೊಲ್ಲಲಿಲ್ಲ. ಯುದ್ಧ ಮಾಡಿದ ಸೈನಿಕರನ್ನು ಮತ್ತು ಅವರ ಸಹಾಯಕರನ್ನು ಬಂಧಿಸಲಾಯಿತು. ಸಾಮಾನ್ಯ ಜನರಿಗೆ ಜಿಝಿಯ ನೀಡುವ ಮತ್ತು ಝಿಮ್ಮಿಗಳಾಗುವ ಶರ್ತವನ್ನು ಒಡ್ಡಿ ಆಹ್ವಾನಿಸಿದಾಗ ಅವರು ಅಂಗೀಕರಿಸಿದರು.

ಉಲ್ಲೀಸ್ ಯುದ್ಧ ಸಹ ಹಿಜರಿ 12ರ ಸಫರ್ ತಿಂಗಳಲ್ಲಿ ನಡೆಯಿತು. ತೀವ್ರ ಯುದ್ಧವಾಗುವ ಸಂಭಾವ್ಯತೆಯನ್ನು ಮನವರಿಕೆ ಮಾಡಿಕೊಂಡು ಸಾಮಗ್ರಿಗಳ ಕೊರತೆಯ ಬಗ್ಗೆ ವ್ಯಾಕುಲಗೊಂಡು ಹಝ್ರತ್ ಖಾಲಿದ್(ರ) ಹೀಗೆ ಪ್ರಾರ್ಥಿಸಿದರು: ಹೇ ಅಲ್ಲಾಹ್! ನೀನು ನನಗೆ ಶತ್ರುಗಳ ಮೇಲೆ ಜಯವನ್ನು ದಯಪಾಲಿಸಿದರೆ ನಾನು ಒಬ್ಬನೇ ಒಬ್ಬ ಶತ್ರುವನ್ನು ಜೀವಂತವಾಗಿ ಇರಿಸಲಾರೆ. ಈ ನದಿ ಅವರ ರಕ್ತದಿಂದ ಕೆಂಪಗಾಗುವುದು.

ಅನಂತರ ಅವರು ಯುದ್ಧ ತಂತ್ರವನ್ನು ಬಳಸಿಕೊಂಡು ಎಡ ಭಾಗದಿಂದಲೂ ಬಲ ಭಾಗದಿಂದಲೂ ಇರಾನಿ ಸೈನ್ಯದ ಹಿಂಬಾಗದಲ್ಲಿ ಆಕ್ರಮಣ ಮಾಡಲು ಹೇಳಿದರು. ಆ ಕಾರಣದಿಂದ ಇರಾನಿ ಸೇನೆ ಚಲ್ಲಾಪಿಲ್ಲಿಯಾಗಿ ಚದುರಿ ಹೋಯಿತು. ಶತ್ರುಗಳನ್ನು ಹಿಡಿಗೂಡಲು ಅವರು ಆಜ್ಞಾಪಿಸಿದರು. ನೇರವಾಗಿ

ಹೋರಾಡಿದವರನ್ನು ಹೊರತು ಬೇರೆ ಯಾರನ್ನೂ ಕೊಲ್ಲಬಾರದೆಂದು ಆಜ್ಞಾಪಿಸಿದರು.

(ಬಂಧಿತರನ್ನು ಹತ್ಯೆ ಮಾಡಿ ರಕ್ತದ ಹೊಳೆಯಲ್ಲಿ ಎಸೆಯುವ ಬಗ್ಗೆ ವಿಶದೀಕರಿಸುತ್ತಾ ಹುಝೂರ್ ಹೇಳಿದರು:) ತಾರೀಖ್ ತಬರಿ ಮತ್ತು ಬಹುತೇಕ ಜೀವನ ಚರಿತ್ರೆಗಾರರು ಹೀಗೆ ಹೇಳಿದ್ದಾರೆ: ಹಝ್ರತ್ ಖಾಲಿದ್(ರ) ತನ್ನ ಪ್ರತಿಜ್ಞೆ ಪ್ರಕಾರ ಒಂದು ರಾತ್ರಿ ಮತ್ತು ಒಂದು ಹಗಲು ಬಂಧಿಸಲ್ಪಟ್ಟವರನ್ನೆಲ್ಲಾ ಹತ್ಯೆ ಮಾಡಿ ನದಿಗೆ ಎಸೆದರು. ಆ ನದಿ ಕೆಂಪಗಾಯಿತು. ಆ ನದಿಯನ್ನು ಈಗ ಸಹ ನಹರುದ್ದಮ್ (ರಕ್ತದ ಹೊಳೆ) ಎಂದು ಕರೆಯಲಾಗುತ್ತಿದೆ.

ಇಸ್ಲಾಮೀ ಯುದ್ಧಗಳಲ್ಲಿ ವಿಶಿಷ್ಟವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದ ಯುದ್ಧಗಳಲ್ಲಿ ಮತ್ತು ಮೊದಲಿನ ನಾಲ್ಕು ಖಲೀಫರ ಕಾಲದ ಯುದ್ಧಗಳಲ್ಲಿ ಇಂತಹ ರೀತಿಯ ಹತ್ಯೆ ಎಂದೂ ನಡೆದಿಲ್ಲ. ಸಾವಿರಾರು ಅಥವಾ ಲಕ್ಷಾಂತರ ಸೈನಿಕರು ಕೇವಲ ಯುದ್ಧ ಮಾಡುವಾಗ ಮಾತ್ರ ಕೊಲ್ಲಲ್ಪಟ್ಟಿದ್ದರು.

ಹಝ್ರತ್ ಖಾಲಿದ್(ರ)ರಿಗೆ ಸಂಬಂಧಿಸಿದ ವಿವರಣೆಗಳಲ್ಲಿ ಉತ್ಪ್ರೇಕ್ಷೆ ಮತ್ತು ಅತಿಶಯೋಕ್ತಿಗಳು ಸೇರಿರಬಹುದು. ಈ ಕಾರಣ ದಿಂದ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರ ವಿರುದ್ಧ ಕಟುವಾದ ವಿಮರ್ಶೆ ಮಾಡಲಾಗುತ್ತಿದೆ. ಮುಸ್ಲಿಮರು ಮೃಗೀಯವಾಗಿ ವರ್ತಿಸಿದ ಬಗ್ಗೆ ಆಕ್ಷೇಪಗಳು ಮಾಡಲಾಗುತ್ತಿದೆ. ಸತ್ಯವೇನೆಂದು ಅಲ್ಲಾಹನಿಗೆ ಮಾತ್ರ ಚೆನ್ನಾಗಿ ತಿಳಿದಿದೆ. ಆದರೆ ಬಾಹ್ಯವಾಗಿ ಇವುಗಳೆಲ್ಲ ಆಪಾದನೆಗಳೆಂದು ತೋರುತ್ತದೆ.

ಇಮ್‌ಗೀಶಿಯಾದ ಜಯದ ಬಗ್ಗೆ ಹೀಗೆ ಹೇಳಲಾಗಿದೆ. ಇರಾಖ್ ದೇಶದ ಒಂದು ಭಾಗವಾದ ಈ ಪ್ರದೇಶವನ್ನು ಹಿಜರಿ 12ರ ಸಫರ್ ತಿಂಗಳಲ್ಲಿ ಯುದ್ಧ ಮಾಡದೆ ಜಯಿಸುವಂತೆ ಅಲ್ಲಾಹನು ಮಾಡಿದನು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಹೊರಟಾಗ ಅಲ್ಲಿನ ಜನರು ಅಲ್ಲಿಂದ ಓಡಿಹೋದರು. ಅಲ್ಲಿ ಮುಸ್ಲಿಮರಿಗೆ ಎಷ್ಟು ಸಂಪತ್ತು ದೊರೆಯಿತು ಎಂದರೆ ಹಿಂದೆದೂ ಅಷ್ಟು ಲಭಿಸಿರಲಿಲ್ಲ.

ಉಲ್ಲೀಸ್ ಮತ್ತು ಇಮ್‌ಗೀಶಿಯಾದ ಜಯದ ಬಗ್ಗೆ ಬನೂ ಅಜಲ್ ಗೋತ್ರದ ಜುಂದಲ್ ಎಂಬವರ ಮೂಲಕ ಹಝ್ರತ್ ಅಬೂಬಕರ್(ರ)ರಿಗೆ ವರದಿ ತಲಪಿಸಲಾಯಿತು. ಆ ವ್ಯಕ್ತಿ ಹಝ್ರತ್ ಅಬೂಬಕರ್(ರ)ರೊಡನೆ ಯುದ್ಧಗಳಲ್ಲಿ ಲಭಿಸಿದ ಜಯದ ಬಗ್ಗೆ, ದೊರೆತ ಸಂಪತ್ತಿನ ಬಗ್ಗೆ, ಬಂಧಿತರ ಸಂಖ್ಯೆ, ವಿಶಿಷ್ಟವಾಗಿ ಹೋರಾಡಿದವರ ಬಗ್ಗೆ, ಹಝ್ರತ್ ಖಾಲಿದ್(ರ)ರ ಶೌರ್ಯದ ಬಗ್ಗೆ ವಿಶದವಾಗಿ ವಿವರಿಸಿದರು. ಆ ವಿವರಣೆಯನ್ನು ಹಝ್ರತ್ ಅಬೂಬಕರ್(ರ) ಬಹಳ ಮೆಚ್ಚಿದರು. ಅವರಿಗೆ ಒಬ್ಬ ಬಂಧಿತೆ ಮಹಿಳೆಯನ್ನು ದಾಸಿಯಾಗಿ ನೀಡಲಾಯಿತು. ಆಕೆಯ ಮೂಲಕ ಮಕ್ಕಳು ಜನಿಸಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಇನ್ನು ಮುಂದೆ ಖಾಲಿದ್ ಬಿನ್ ವಲೀದ್(ರ)ರಂತಹ ಮಕ್ಕಳನ್ನು ಮಹಿಳೆಯರು ಹೆರಲಾರರು.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

*At, Masjid Mubarak, Islamabad, Tilford, UK, On 22-07-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon